ಪ್ರಕೃತಿ

# ಕುಂಟಾಲು ಪಲ್ಕೆಯ ಜಲವೈಭವ!

ನೀರು ನೊರೆ ನೊರೆಯಾಗಿ ಕಲ್ಲುಗಳ ಮಧ್ಯೆ ಚಿಮ್ಮಿ ಬರುವಾಗ ಹೊಳೆಯ ಸೌಂದರ್ಯ ಅನನ್ಯ. ನೋಡುತ್ತಿದ್ದರೆ ಸಮಯ ಹೋದುದರ ಅರಿವೆಯೇ ಆಗದು.

■ **ಬೆನಕನಹಳ್ಳಿ ಶೇಖರಗೌಡ**

ಚಿತ್ರ: ರಮೇಶ್ ಕೈಂತಜೆ



# ಔಷಧೀಯ ಗುಣ ಸ್ಫಟಿಕ



ಸ್ಫಟಿಕ ಹೂವು ನೋಡಲಷ್ಟೇ ಚಂದವಲ್ಲ; ಉತ್ತಮ ಔಷಧೀಯ ಗುಣವನ್ನೂ ಹೊಂದಿದೆ.

■ ಚಿತ್ರ-ಬರಹ: **ಸುಮನಾ ಜಿ. ಪ್ರಸಾದ್**

ಮನೆಯಂಗಳದಲ್ಲಿ ಬೆಳಿಗ್ಗೆ ಆಕರ್ಷಕ ಬಣ್ಣಗಳಿಂದ ನಳನಳಿಸುವ ಹೂವು ನಿತ್ಯಪೂಜೆಗೆ ಸದಾ ಸಿಗುತ್ತದೆ. ಆಕಾರದಲ್ಲಿ ಹೆಚ್ಚು ಕಡಿಮೆ ಕರವೀರ ಪುಷ್ಪವನ್ನೇ ಹೋಲುವ ಸುಂದರ ಹೂವು ಗೊರಟಿಗೆ. ಈ ಹೂವಿಗೆ ಘಮ್ಮೆನ್ನುವ ಸುಗಂಧ ಇರದಿದ್ದರೂ ಅಂದದ ಬಣ್ಣದಿಂದಲೇ ಹೂವು ಪ್ರಿಯರನ್ನು ಸೆಳೆಯುವ ಗೊರಟಿಗೆ ಪೂಜೆಗೆ, ಅಲಂಕಾರಕ್ಕೆ, ಮುಡಿಯಲು.. ಹೀಗೆ ನಾನಾ ರೀತಿಯಲ್ಲಿ ಉಪಯೋಗಕ್ಕೆ ಬರುತ್ತದೆ. ಕಡುನೀಲಿ, ನೇರಳೆ, ಬಿಳಿ, ತಿಳಿ ಗುಲಾಬಿ, ಕೆಂಪು, ಹಳದಿ ಮುಂತಾದ ಬಣ್ಣಗಳಿಂದ ಗಿಡ ತುಂಬಾ ಹೂವು ಬಿಡುವ ಗೊರಟಿಗೆ ಕೈತೋಟದಲ್ಲಿ ಎದ್ದುಕಾಣುವ ಆಕರ್ಷಕ ಸೌಂದರ್ಯ ಹೊಂದಿದೆ.

ಗೊರಟೆ, ಗೊರಟಿಗೆ, ಸ್ಫಟಿಕ ಮುಂತಾದ ಹೆಸರುಗಳಿಂದ ಕರೆಸಿಕೊಳ್ಳುವ ಈ ಹೂವು ಬೆಳಿಗ್ಗೆ ಬೇಗನೆ ಅರಳುತ್ತದೆ. ಸೂರ್ಯನ ಕಡುಬಿಸಿಲು ಇದ್ದರೂ ಬೇಗನೆ ಬಾಡುವ ಗುಣ ಇದಕ್ಕಿಲ್ಲ.

ಇದೇ ಹೆಸರಿನಿಂದ ಕರೆಯುವ ಗೊರಟೆ ಹೂವುಗಳ ಇನ್ನೊಂದು ಪ್ರಬೇಧದಲ್ಲಿ ಹಳದಿ ಬಣ್ಣದ ಹೂವುಗಳೂ ಅರಳುತ್ತವೆ. ಕಡುಗೆಂಪು ಬಣ್ಣದ ಹೂವುಗಳೂ ರಕ್ತಗೊರಟಿಗೆ ಎಂದು ಪ್ರಸಿದ್ಧ. ಹಳದಿ ಗೊರಟೆ ಗಿಡದಲ್ಲಿ ಮುಳ್ಳುಗಳಿರುತ್ತವೆ. ಗೊರಟೆ ಹೂವುಗಳು ಇಡೀ ಹೂತೋಟಕ್ಕೆ ವಿಶೇಷ ಮೆರುಗು ನೀಡುವಂಥವು. ಇದು ಪೊದೆಗಳಂತೆ ಬೆಳೆಯುವ ಸಸ್ಯ. ಎಲೆಗಳು ಕಡು ಹಸುರು ಮತ್ತು ಎಲೆಯ ಕೆಳಭಾಗ ತಿಳಿಹಸುರು ಬಣ್ಣದ್ದಾಗಿದೆ. ಸಂಸ್ಕೃತದಲ್ಲಿ ಈ ಗಿಡಕ್ಕೆ 'ಸಹಚಾರ, ಸರ್ೈಕಾ' ಮುಂತಾದ